# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003





ಸಂಪುಟ - 14 Reg. No. : KARBIL / 2005 / 16123 ಆಗಸ್ಟ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30–00 ಸಂಚಿಕೆ : 08 ಪ್ರಕಟಣೆ : 25–08–2025


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ – ಆಟಿತೊ ಆಟ – ಕೂಟ












ವರದಿ : ಒಳ ಪುಟದಲ್ಲಿ



ಚಿತ್ರ : ರಘುವೀರ್ ಪೆರ್ಡೂರು

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ – ಅಷ್ಟಮಿ ಆಚರಣೆ















ವರದಿ : ಒಳ ಪುಟದಲ್ಲಿ

ಚಿತ್ರ : ರಘುವೀರ್ ಪೆರ್ಡೂರು

# ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ
• ರಘುವೀರ್ ಪೆರ್ಡೂರು • ಟಿ.ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.
• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 ✆ : 9343361618 e-mail : jnanashakthisss@gmail.com


## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ

**ಕೋಂ. ಕೆ. ಸದಾಶಿವ ಶಾಸ್ತ್ರಿ 3-68(7)**
**ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ – 575 019**

2024-25ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಠ ಶ್ರೇಣಿ) ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರನ್ನು ದಿನಾಂಕ 5-10-2025ನೇ ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ, ಆಸಕ್ತ ವಿದ್ಯಾರ್ಥಿ / ವಿದ್ಯಾರ್ಥಿನಿಯರು ತಮ್ಮ ***ಅಂಕಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ*** ಇತ್ಯಾದಿಗಳನ್ನು ದಿನಾಂಕ 20-09-2025ನೇ ಶನಿವಾರದ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

***– ಕೆ. ಸದಾಶಿವ ಶಾಸ್ತ್ರಿ ✆ : 8242408544***

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಿದುಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ ಗಂಟೆ 7–00ರಿಂದ ಸಂಜೆ ಗಂಟೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿಗಾಗಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598


ಪತ್ರಿಕೆಗೆ ಶುಭ ಬಯಸುವ–

**Dr. Jayalakshmi Devi**
**Dr. Jaganmohan, Smt. Asha Mohan**
**Akarsh M. Rao**
**Konchadi, Mangalore - 575 008**


## ಶ್ರೀ ಸುಬ್ರಹ್ಮಣ್ಯ ಸಭಾ 'ನೆಲದ ಸಿರಿಗೆ ನಮನ' ಕೃಷಿ ಪಂಡಿತರ ಸನ್ಮಾನ




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಇನ್ನ ಚಂದ್ರಕಾಂತ ರಾಯರು, ಉದ್ಯೋಗ ಮಾಡುತ್ತಿರುವಾಗಲೇ ತನ್ನೊಳಗೆ ಸುಪ್ತ ಮನಸ್ಸಿನಲ್ಲಿ ಬೆಳೆಯುತ್ತಿದ್ದ ಕೃಷಿಕನಾಗುವ ತುಡಿತವನ್ನು ಸಾಕಾರಗೊಳಿಸಲು ಊರಿಗೆ ಬಂದು, ಅವಿರತ ಪರಿಶ್ರಮದಿಂದ ತಮ್ಮ ಕನಸನ್ನು ನನಸಾಗಿಸಿಕೊಂಡರು. ಈ ಕೃಷಿಕನ ಪಯಣ 'ಇನ್ನ' ಎಂಬ ಪುಟ್ಟ ಗ್ರಾಮದಲ್ಲಿ ಕೃಷಿಕ್ರಾಂತಿಗೆ ಮುನ್ನುಡಿ ಬರೆಯಿತು. ಅದರ ಫಲವಾಗಿ ಸುಂದರ ವಿಧವಿಧದ ಹಣ್ಣುಗಳ ತೋಟ ರಾರಾಜಿಸಿತು. ಸಾಧಕರ ಸಾಧನೆ ಸದ್ದಿಲ್ಲದೇ ಎಲ್ಲಾ ಕಡೆಗೂ ಪಸರಿಸುವಂತೆ, ಈ ಬೆಳವಣಿಗೆ, ಈ ಬದಲಾವಣೆ ಕರ್ನಾಟಕ ಸರಕಾರದ ಗಮನಕ್ಕೆ ಬಂದು ಇವರನ್ನು 'ಕೃಷಿಪಂಡಿತ' ಎಂಬ ಬಿರುದಿನೊಂದಿಗೆ ಗೌರವಿಸಿತು. ನಮ್ಮ ದೇಶದ ಯುವಕರಿಗೆ ಹೀಗೂ ಮಾಡಬಹುದು, ಇದರಿಂದಾಗಿ ಫಲವತ್ತಾದ ಆದರೆ ಈಗ ಅಸಡ್ಡೆಗೆ ಒಳಗಾದ ಭೂಮಿಯಲ್ಲಿ ಚಿನ್ನದ ಬೆಳೆ ಬೆಳೆಯಬಹುದು ಎಂಬ ಸತ್ಯದರ್ಶನವನ್ನು ಮಾಡಿಸಿದ್ದಾರೆ. ಓರ್ವ ಇಂಜಿನಿಯರ್, ಕೃಷಿಕನಾಗಿ ಯಾವ ಸಾಧನೆಯನ್ನು ಮಾಡಬಹುದು ಎಂಬುವುದನ್ನು ಎಲ್ಲರಿಗೂ ತಿಳಿಯುವಂತಾಗಲು, ತನ್ನ ತೋಟವನ್ನು ವೀಕ್ಷಿಸಲು ಆಸಕ್ತರಿಗೆ ಮುಕ್ತ ಅವಕಾಶವನ್ನೂ ಕಲ್ಪಿಸಿದ್ದಾರೆ. ಶ್ರೇಷ್ಠ ಅಧ್ಯಾಪಕರ ಮಗನಾಗಿರುವ ಶ್ರೀ ಚಂದ್ರಕಾಂತ ರಾಯರು, ನಮ್ಮ ಸಭಾದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಿದ್ದಾರೆ.

ಅವರನ್ನು ಶ್ರೀ ಸುಬ್ರಹ್ಮಣ್ಯ ಸಭಾವು ತಾ. 20–07–2025ರಂದು ನಡೆದ ಸಮಾರಂಭದ ವೇದಿಕೆಯಲ್ಲಿ ಅಭಿಮಾನದಿಂದ ಗುರುತಿಸಿ ಗೌರವಿಸಲಾಯಿತು. ಅವರಿಗೆ ಇಂತಹ ವಿವಿಧ ಕ್ಷೇತ್ರಗಳಲ್ಲಿ, ಸಮಾಜಮುಖಿಯಾಗಿ ಹೆಚ್ಚಿನ ಸಾಧನೆ ಮಾಡಲು ದೇವರು ಶಕ್ತಿ ಕೊಡಲಿ ಎಂದು ಶ್ರೀ ಸುಬ್ರಹ್ಮಣ್ಯ ಸಭಾದ ಸದಸ್ಯರಾದ ನಮ್ಮೆಲ್ಲರ ಪ್ರೀತಿಯ ಹಾರೈಕೆಗಳು.

*ಛಾಯಾಚಿತ್ರ : ರಘುವೀರ್ ಪೆರ್ಡೂರು*

**ಮಿತ್ರ ಬಳಗ, ಎಸ್. ಕೋಡಿ**
ಆಶ್ರಯದಲ್ಲಿ ನಡೆದ
**79ನೇ ಸ್ವಾತಂತ್ರ್ಯ ದಿನಾಚರಣೆಯ**
ಸಂದರ್ಭದಲ್ಲಿ ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ ನಂದಾವರ ಕೌಳಿಗೆ ಶ್ರೀ ಗಿರಿಧರ ರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.




*Sri Hari Adyapady*
*Proprietor*

Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**

***We undertake all types of Electrical, Plumbing and Sanitary works***



ಪತ್ರಿಕೆಗೆ ಶುಭ ಬಯಸುವ –

**ಕೆ. ಆರ್. ಉಪಾಧ್ಯಾಯ**
**ಮಂಗಳೂರು**

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ
## ಇಂಜಿನಿಯರ್ ಶ್ರೀ ಪಿ. ಮುರಳೀಧರ್ ರಾವ್ ಇವರಿಗೆ ಸನ್ಮಾನ




ಫಲಿಮಾರು ಶ್ರೀ ವೆಂಕಟರಾವ್ ಮತ್ತು ಶ್ರೀಮತಿ ಗಂಗಮ್ಮ ದಂಪತಿಗಳ ಪುತ್ರನಾಗಿ ಜನಿಸಿ, ಮಂಗಳೂರಿನಲ್ಲಿ ಇಂಜಿನಿಯರ್ ವಿದ್ಯಾಭ್ಯಾಸ ಮುಗಿಸಿ, 1968ರಿಂದಲೇ ತನ್ನ ವೃತ್ತಿಯನ್ನು ಪ್ರಾರಂಭಿಸಿದರು. ಆ ಸಮಯದಲ್ಲಿ ಮಂಗಳೂರು ಉಡುಪಿ, ಕುಂದಾಪುರ, ಪುತ್ತೂರು ಮುಂತಾದ ಕಡೆ ಬಹುಮಹಡಿ ಕಟ್ಟಡ, ಹೋಟೇಲುಗಳ ನಿರ್ಮಾಣ, ಬಲ್ಲಾಳ್ ಗ್ರೂಪ್‌ನವರ ಮಂಗಳೂರು, ಬೆಂಗಳೂರು, ಚೆನ್ನೈ ಮುಂತಾದ ವಿವಿಧ ಸ್ಥಳಗಳಲ್ಲಿ ನಿರ್ಮಿಸಿದ ಎಲ್ಲಾ ಆಸ್ಪತ್ರೆಗಳು, ಹೋಟೇಲುಗಳು, ಕಾಂತಾವರ, ಗೋವಾದವರೆಗೆ ಪ್ರಖ್ಯಾತ ದೇವಸ್ಥಾನಗಳು, ಸಮಾಜದ ಪ್ರತಿಷ್ಠಿತರ ಮನೆಗಳನ್ನು ನಿರ್ಮಿಸಿದ ಕೀರ್ತಿ ಇವರದು.

ಕಂಪ್ಯೂಟರ್ ಸಾಫ್ಟ್‌ವೇರ್ ಇಲ್ಲದ ಕಾಲಘಟ್ಟದಲ್ಲಿಯೂ ಕೂಡ ಸುಂದರವಾದ ದೀರ್ಘ ಬಾಳಿಕೆಯ, ಗ್ರಾಹಕರ ಮನಸ್ಸಿಗೆ ಒಪ್ಪುವ ಮನೆ ಕಟ್ಟಿಸಿರುವುದಲ್ಲದೆ, ತನ್ನ ಜೊತೆ ಕೆಲಸ ಮಾಡುವ ಹೆಚ್ಚಿನ ಕಂಟ್ರಾಕ್ಟರ್‌ಗಳಿಗೆ ಕೆಲಸ ಒದಗಿಸಿ ಅವರಿಗೆ ಸ್ವತಂತ್ರವಾಗಿ ಬದುಕಲು ದಾರಿ ಮಾಡಿಕೊಟ್ಟವರು. ಸರಕಾರಿ ಕಚೇರಿಗಳು, ಮನೆಗಳು, ಕಟ್ಟಡಗಳಿಗೆ ಏನು ಸಮಸ್ಯೆ ಬಂದರೂ ಕ್ಲಪ್ತ ಸಮಯಕ್ಕೆ ಮುಗಿಸಿಕೊಡುವ ಚಾಕಚಕ್ಯತೆ ಹೊಂದಿರುವವರು. ಕರ್ನಾಟಕ ಬ್ಯಾಂಕಿನ ಹಿರಿಯ ಕನ್ಸಲ್ಟಿಂಗ್ ಇಂಜಿನಿಯರ್ ಆಗಿ ಈಗಲೂ ಸೇವೆ ಸಲ್ಲಿಸುತ್ತಿರುವವರು. ಅಗತ್ಯ ಇರುವವರಿಗೆ ಇಂದಿನವರೆಗೂ ಉಚಿತ ಮಾಹಿತಿ, ಪ್ಲಾನ್, ಉಚಿತ ಸೂಪರ್ ವಿಷನ್ ಎಲ್ಲವನ್ನು ತನ್ನ ಮುತುವರ್ಜಿಯಲ್ಲಿ ಸಮಾಜ ಬಾಂಧವರಿಗೆ ನೀಡುವ ಮೂಲಕ ಎಲ್ಲರ ಮನದಲ್ಲಿಯೂ ತನ್ನ ಕಾರ್ಯನಿಷ್ಠೆಯಿಂದ ಜನ ಮೈತ್ರಿ ಸ್ವಭಾವವನ್ನು ಹೊಂದಿರುವುದು ಅವರ ವಿಶಿಷ್ಟ ಗುಣ. ಸುಮಾರು 2000 ಇಸವಿಯಿಂದಲೇ ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾಗಿದ್ದು ಇಂದಿನವರೆಗೂ ಆ ಹುದ್ದೆಗೆ ನ್ಯಾಯ ಒದಗಿಸಿದ್ದಾರೆ. ಅವರ ತಂದೆಯವರು ಕೂಡಾ ಸದನದಲ್ಲಿ ಸೇವೆ ಸಲ್ಲಿಸಿದ್ದರು. ಶ್ರೀ ಸುಬ್ರಹ್ಮಣ್ಯ ಸಭಾ ಕಟ್ಟಡಕ್ಕೆ ಸಂಬಂಧಿಸಿದ ಕೆಲಸಗಳನ್ನು ಇಂದಿನವರೆಗೂ ಅವರೇ ಉಚಿತವಾಗಿ ನಿರ್ವಹಿಸುತ್ತಿದ್ದು, ಅವರು ತೋರಿದ ಶ್ರದ್ಧೆ, ನಿಖರತೆ, ದೀರ್ಘ ಅನುಭವವು ಅನೇಕರಿಗೆ ಮಾದರಿಯಾಗಿದೆ. ಅದಲ್ಲದೆ ಪುತ್ತೂರಿನ ಶಿವಸದನದ ನಿರ್ಮಾಣ ಸಮಯದಲ್ಲಿ ಪುತ್ತೂರಿನ ಸದಸ್ಯರು ಇವರ ಸಲಹೆಯನ್ನು ಪಡೆದುಕೊಂಡು, ಪುನಃ ಹೆಚ್ಚಿನ ಮಹಡಿ ಕಟ್ಟಿಸುವಲ್ಲಿ ಇವರ ಕೊಡುಗೆ ಅಪಾರ. ಸದನ ಮತ್ತು 'ಶಿವಸದನ'ದ ಎಲ್ಲಾ ಕೆಲಸಗಳನ್ನೂ ಅವರು ಏನೊಂದೂ ಪ್ರತಿಫಲಾಪೇಕ್ಷೆ ಇಲ್ಲದೆ ಸೇವೆ ನೀಡುತ್ತಿರುವುದು ನಮಗೆ ಹೆಮ್ಮೆಯ ವಿಷಯ.

ತನ್ನ ತಂದೆ ತಾಯಿಯರ ಹೆಸರಿನಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿಯನ್ನು ಸ್ಥಾಪಿಸಿರುವುದಲ್ಲದೆ, ದೇವರ ಪೂಜಾಕಾರ್ಯಗಳಿಗೆ ಪಾವಂಜೆ ದೇವಸ್ಥಾನದಲ್ಲಿಯೂ ನಿಧಿಯನ್ನು ಸ್ಥಾಪಿಸಿದ್ದಾರೆ. ಇನ್ನು ಇವರ ಪತ್ನಿ ನಗುಮೊಗದಿಂದ ಎಲ್ಲರೊಂದಿಗೆ ಪ್ರೀತಿಯಿಂದ ಬೆರೆಯುವ ಶ್ರೀಮತಿ ಮಂಜುಳಾ ಮುರಳೀಧರ್ ಉತ್ತಮ ಕವಿಯಿತ್ರಿ. ಸದನದಲ್ಲಿ ನಾಟಕ, ಯಕ್ಷಗಾನ ಭಜನೆ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಮ್ಮ ಮಹಿಳಾ ವೇದಿಕೆಗೆ ಒಂದು ಉತ್ತಮ ಸಲಹೆಗಾರ್ತಿ ಮತ್ತು ಒಂದು ಆಧಾರಸ್ತಂಭ. ಮೂವರು ಮಕ್ಕಳು ಮತ್ತು ಐದು ಜನ ಮೊಮ್ಮಕ್ಕಳ ಸುಖೀಸಂಸಾರದ ಅವರಿಗೆ ದೇವರು ಆರೋಗ್ಯ, ದೀರ್ಘಾಯುಷ್ಯ, ಸಂತೋಷ ನೀಡಿ ಕಾಪಾಡಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ.

*ಛಾಯಾಚಿತ್ರ : ರಘುವೀರ್ ಪೆರ್ಡೂರು*

**ರಾಮಾ ಆಟೋಮೊಬೈಲ್ಸ್**




ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006

ಫೋನ್ : 0824 - 2454355, ಮೊಬೈಲ್ : 9448545702

ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

**ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)**

'ಶ್ರೀ ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003

**ಶಾಖೆಗಳು** ✆ : 9880968032 / 0824-2982095

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454

ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955

ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944

ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803

ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800

ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955

ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344

ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955

ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955

ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917

ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344

ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575

ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967

ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ ✆ : 9741443470

ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು ✆ : 9740925733

ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು ✆ : 9945916755

ಕುಲಶೇಖರ : ಅಕಯ್ದ ಕಾಂಪ್ಲೆಕ್ಸ್, ಶಕ್ತಿನಗರ ಅಡ್ಡ ರಸ್ತೆ ಲ್ಯೂಮಿನಸ್ ಅಪಾರ್ಟ್‌ಮೆಂಟ್ ಬಳಿ, ಪದವು, ಕುಲಶೇಖರ, ಮಂಗಳೂರು ✆ : 8904801404

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 394 ದಿನಗಳ ವರೆಗೆ | - | 6% |
| 13 ತಿಂಗಳು ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ-ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**FIXED DEPOSIT**
ಠೇವಣಿಗಳ ಮೇಲೆ **9.5%**
ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ ಬಡ್ಡಿ
ಆಕರ್ಷಕ ಬಡ್ಡಿದರಗಳು

**ನಿಮ್ಮ ಹೂಡಿಕೆಗಳು ಕೇವಲ 88 ತಿಂಗಳಲ್ಲಿ ದ್ವಿಗುಣವಾಗುವುದು**

**ಲಕ್ಷಾಧೀಶ ಯೋಜನೆ**
ರೂ. **1,00,000/-**

ಪ್ರತಿ ತಿಂಗಳಿಗೆ ರೂ. 1,350 ತೊಡಗಿಸಿ 60 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 2,450 ತೊಡಗಿಸಿ 36 ತಿಂಗಳಲ್ಲಿ
ಪ್ರತಿ ತಿಂಗಳಿಗೆ ರೂ. 3,800 ತೊಡಗಿಸಿ 24 ತಿಂಗಳಲ್ಲಿ

**ಚಿನ್ನಾಭರಣ ಸಾಲ**
ಪ್ರತಿ ಗ್ರಾಂ ಗೆ ₹ **6,800/-**ರ ತನಕ

ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ಮೊಲ**, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

## ಪುತ್ತೂರಿನ 'ಶಿವಸದನ'ಕ್ಕೆ ದೇಣಿಗೆ



ದಿ| ಕುರಾಯ ಗಣಪತಿ ಶಾಸ್ತ್ರಿ ಮತ್ತು ದಿ| ವಿಮಲಾ ಗಣಪತಿ ಶಾಸ್ತ್ರಿ ಇವರ ಸ್ಮರಣಾರ್ಥ ಅವರ ಪುತ್ರ ಮಂಗಳೂರು ನಿವಾಸಿ ಶ್ರೀ ಮುರಳೀಧರ ಶಾಸ್ತ್ರಿ, ಸೊಸೆ ಶ್ರೀಮತಿ ರಾಜೇಶ್ವರಿ ಶಾಸ್ತ್ರಿ, ಮೊಮ್ಮಕ್ಕಳು ಸಾತ್ವಿಕ್ ಶಾಸ್ತ್ರಿ ಮತ್ತು ಸುನಿಧಿ ಶಾಸ್ತ್ರಿ ಇವರು ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 20,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.



ಪುತ್ತೂರು ನಿವಾಸಿ ಶ್ರೀಮತಿ ಮಲ್ಲಿಕಾ ಶ್ರೀಧರ್ ರಾವ್ ಹಾಗೂ ಶ್ರೀ ನಿರಂಜನ್ ರಾವ್ ತಮ್ಮ ತೀರ್ಥರೂಪರಾದ ಪಣಂಬೂರು ಶ್ರೀ ಶಿವರಾವ್, ನಿವೃತ್ತ ಮುಖ್ಯೋಪಾಧ್ಯಾಯರು ಇವರ ನೆನಪಿನಲ್ಲಿ ಪುತ್ತೂರಿನ ಹಿರಿಯ ನಾಗರಿಕರ ವಸತಿನಿಲಯದ ನಿವಾಸಿಗಳಿಗೆ, ವಿಶೇಷಚೇತನ ಮಕ್ಕಳಿಗೆ, ಶಿಕ್ಷಕಿಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ವಿಶೇಷ ಭೋಜನವನ್ನು ಪ್ರಾಯೋಜಿಸಿದ್ದರು. ಟ್ರಸ್ಟ್‌ನ ಕೋಶಾಧಿಕಾರಿ ಶ್ರೀ ದಿನಕರ್ ರಾವ್, ಭೋಜನ ಪ್ರಾಯೋಜಿಸಿದವರಿಗೆ, ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಶ್ರೀಮತಿ ಮಲ್ಲಿಕಾ ಶ್ರೀಧರ್ ರಾವ್, ಶ್ರೀ ಸತ್ಯನಾರಾಯಣ ರಾವ್, ಸಿಬ್ಬಂದಿ ವರ್ಗದವರು ಸಹಕರಿಸಿದರು.



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿರುವ 'ನೆಡ್ಯಾಳ ಕೃಷ್ಣಯ್ಯ ಶ್ರೀಮತಿ ಭವಾನಿಯಮ್ಮ ಸ್ಮಾರಕ ವಿದ್ಯಾರ್ಥಿವೇತನ ನಿಧಿ'ಗೆ ಅವರ ಪುತ್ರ CA ಲಕ್ಷ್ಮೀಶ ಎನ್. ಮತ್ತು ಸೊಸೆ ಶ್ರೀಮತಿ ಉಷಾದೇವಿ ಅವರ 'ಭೀಮರಥ ಶಾಂತಿ' ಸಂದರ್ಭದಲ್ಲಿ ರೂ. 25,000/– ದೇಣಿಗೆ ನೀಡಿದ್ದಾರೆ. ಇವರು ಈ ಹಿಂದೆ ರೂ. 1,90,000/– ನೀಡಿ ಈ ನಿಧಿಯನ್ನು ಸ್ಥಾಪಿಸಿದ್ದು, ಅದನ್ನು ರೂ. 2,15,000/–ಕ್ಕೆ ಹೆಚ್ಚಿಸಿದ್ದಾರೆ ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಆಡಳಿತದ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರ ವಸತಿನಿಲಯ 'ಶಿವಸದನ', ಮುರ. ಪುತ್ತೂರು ಇಲ್ಲಿಗೆ ರೂ. 10,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಾಲ ವಿದ್ಯಾರ್ಥಿವೇತನ ನಿಧಿ ಸ್ಥಾಪನೆ



ಹೈದರಾಬಾದ್ ನಿವಾಸಿ ಶ್ರೀ ಬಿ. ಆರ್. ರಾವ್ ತನ್ನ ಹೆತ್ತವರಾದ ಶ್ರೀ ಕಟಪಾಡಿ ಶ್ರೀ ರಾಮಚಂದ್ರ ರಾವ್ ಮತ್ತು ಶ್ರೀಮತಿ ಸರಸ್ವತಿ ಸ್ಮರಣಾರ್ಥ ಶ್ರೀ ಸಭಾದಲ್ಲಿ ರೂ. 2,00,000/– ನೀಡಿ ಸಾಲ ವಿದ್ಯಾರ್ಥಿವೇತನ ನಿಧಿಯನ್ನು ಸ್ಥಾಪಿಸಿದ್ದಾರೆ.

ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಸ್ಕಾಲರ್‌ಶಿಪ್ ಯೋಜನೆಗೆ ಪ್ರತಿವರುಷವೂ ಕೈಜೋಡಿಸುತ್ತಿದ್ದಾರೆ. ಇವರಿಗೆ ಶ್ರೀ ಸುಬ್ರಹ್ಮಣ್ಯ ಸಭಾ ಪರವಾಗಿ ಅನಂತಾನಂತ ಧನ್ಯವಾದಗಳು.

## ಸ್ಕಾಲರ್‌ಶಿಪ್ ನಿಧಿಗೆ ದೇಣಿಗೆ

ಶ್ರೀ ಸುಬ್ರಹ್ಮಣ್ಯ ಸಭಾದ ಸ್ಕಾಲರ್‌ಶಿಪ್ ನಿಧಿಗೆ ಮಂಗಳೂರಿನ ಉರ್ವ ನಿವಾಸಿ ಶ್ರೀ ಹೇಮಚಂದ್ರ ರಾವ್ ಮತ್ತು ಶ್ರೀಮತಿ ಶೈಲ ರಾವ್ ಇವರ ಪುತ್ರ ಕೆನಡಾದಲ್ಲಿ ಉದ್ಯೋಗದಲ್ಲಿರುವ ಶ್ರೀ ಶರತ್ ರಾವ್ ಮತ್ತು ತೇಜಸ್ವಿನಿ ರಾವ್ ಇವರು ರೂ. 15,000/–ವನ್ನು ದೇಣಿಗೆ ನೀಡಿರುವರು.


Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

PREETHIKA AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

## ಶ್ರೀ ಸಭಾದ ಪೋಳಲಿಯ ಹೊಸ ಯೋಜನೆಗೆ ದೇಣಿಗೆ



ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಹಾಗೂ ಶ್ರೀಮತಿ ಸುಮನ್ ಕೃಷ್ಣ ಅವರ ಮಗಳು ಡಾ. ಅಲಕ ನಿಖಿಲ್, ಅಳಿಯ ಡಾ. ನಿಖಿಲ್ ಜೋಶಿ, ಮಕ್ಕಳಾದ ಮಾಸ್ಟರ್ ವಿಹಾನ್ ಜೋಶಿ, ಕುಮಾರಿ ಅನಿಕ ಜೋಶಿ ಜತೆಗೂಡಿ ಶ್ರೀ ಸಭಾದ ಪೋಳಲಿಯ ಹೊಸ ಯೋಜನೆಗೆ ರೂ. 50,000/–ವನ್ನು (ಐವತ್ತು ಸಾವಿರ) ತಮ್ಮ ಮೊಮ್ಮಗ ಚಿ| ವಿಹಾನ್ ಜೋಶಿ ಉಪನಯನದ ಸಂದರ್ಭದಲ್ಲಿ ದೇಣಿಗೆ ನೀಡಿದ್ದಾರೆ. ಅವರ ಕುಟುಂಬದವರಿಗೆಲ್ಲರಿಗೂ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತ ಧನ್ಯವಾದಗಳು.



ಪುತ್ತೂರು ಶಿವಸದನದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯುತ್ತಿದ್ದು, ಸಭೆ–ಸಮಾರಂಭಗಳಿಗೆ ಅಗತ್ಯವಾಗಿದ್ದು, ವೇದಿಕೆಗೆ ಶೋಭೆ ತರುವ ಸುಂದರ ಪೋಡಿಯಂನ್ನು 'ಶಿವಸದನ'ದ ಮೇಲಿನ ಪ್ರೀತಿಯಿಂದ ಶ್ರೇಯೋಭಿಲಾಷಿ ಓರ್ವರು ಉದಾರವಾಗಿ ದೇಣಿಗೆ ನೀಡಿದ್ದಾರೆ.




ಪುತ್ತೂರು ಶಿವಸದನದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳಿಂದ ಮತ್ತು ಪ್ರೀತಿಮಯವಾದ, ಸಂತಸ ತರುವ ವಾತಾವರಣದಿಂದ ಮುದಗೊಂಡ 'ಶಿವಸದನ'ದ ನಿವಾಸಿ ನಿವೃತ್ತ ಅಧ್ಯಾಪಕರು ಶ್ರೀ ಕೆ. ಸುಬ್ರಾಯ ಭಟ್ ತನ್ನ ಪತ್ನಿ ಕೀರ್ತಿಶೇಷ ಶ್ರೀಮತಿ ಮೂಕಾಂಬಿಕಾ ಅವರ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ಕ್ಕೆ ರೂ. 1,00,000/– (ರೂ. ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR



## ಲಯನ್ಸ್ ಜಿಲ್ಲಾ 317 ಡಿ ಇದರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ




ಲಯನ್ಸ್ ಜಿಲ್ಲಾ 317 ಡಿ ಇದರ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು 20ನೇ ತಾರೀಕು ಭಾನುವಾರ ಸಂಜೆ ನಡೆಯಿತು. ಇದರಲ್ಲಿ 'ತನಿಕ' 2024 – 2025ರ ಪ್ರಶಸ್ತಿಯನ್ನು ಶ್ರೀ. ಬಿ. ಎಸ್. ವಿನೋದ್ ರಾವ್ ಇವರಿಗೆ 'Diamond Zone envoy' ಹಾಗೂ ಅವರ ಪತ್ನಿ ಶ್ರೀಮತಿ ಜಯಂತಿ ವಿನೋದ್ ರಾವ್ ಇವರಿಗೆ ಅನಾಥಾಶ್ರಮಗಳಿಗೆ ಮಾಡಿದ ಸೇವೆಗಾಗಿ 'Golden District Chairperson' ಪ್ರಶಸ್ತಿಯನ್ನು ಜಿಲ್ಲಾ Lions ಗವರ್ನರ್ ಶ್ರೀಮತಿ ಬಿ. ಎಂ. ಭಾರತಿಯವರು ಪ್ರದಾನ ಮಾಡಿದರು. ಇವರಿಗೆ ಸುಬ್ರಹ್ಮಣ್ಯ ಸಭಾದ ಪರವಾಗಿ ಅಭಿನಂದನೆಗಳು.

## ವಿದ್ಯಾರ್ಥಿಗಳ ಭವಿಷ್ಯಕ್ಕೆ ಬೆಂಬಲ ವಿದ್ಯಾರ್ಥಿವೇತನ ನಿಧಿಗೆ ಕೊಡುಗೆ

ನಂದಳಿಕೆ ಶ್ರೀ ಶಶಿಕಾಂತ ರಾವ್ ತನ್ನ ತೀರ್ಥರೂಪರ ಸ್ಮರಣಾರ್ಥ ಶ್ರೀ ನಂದಳಿಕೆ ಶಿವರಾವ್ ಸ್ಮರಣಾರ್ಥ ವಿದ್ಯಾರ್ಥಿವೇತನ ನಿಧಿಯನ್ನು ರೂ. 55,000/– ನೀಡಿ ಸ್ಥಾಪಿಸಿದ್ದರು. ಈ ವರ್ಷ ರೂ. 10,000/– ದೇಣಿಗೆ ನೀಡಿ ಒಟ್ಟಿಗೆ ಈ ನಿಧಿಯನ್ನು ರೂ. 65,000/–ಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

# ಸುರತ್ಕಲ್ ಸಂಘದಲ್ಲಿ 'ಆಟಿಡೊಂಜಿ ದಿನ'

ದಿನಾಂಕ 3–08–2025ನೇ ರವಿವಾರ ನಮ್ಮ ಸಂಘದ ವತಿಯಿಂದ 'ಆಟಿಡೊಂಜಿ ದಿನ' ಕಾರ್ಯಕ್ರಮವನ್ನು ಮಲ್ಲಮಾರು ಶ್ರೀ ಭವಾನಿಶಂಕರ ರಾವ್ ಅವರ ಮನೆಯಲ್ಲಿ ಆಚರಿಸಲಾಯಿತು. ಬೆಳಗ್ಗೆ ಗಂಟೆ 9–30ಕ್ಕೆ ಸರಿಯಾಗಿ ನೆರೆದಿದ್ದ ಗಣ್ಯರ ಹಾಗೂ ಸಮಾಜ ಬಾಂಧವರ ಸಮ್ಮುಖದಲ್ಲಿ ಗಣಪತಿಯ ಪ್ರಾರ್ಥನೆಯೊಂದಿಗೆ ದೀಪ ಬೆಳಗಿಸಿ ಉದ್ಘಾಟಿಸಲಾಯಿತು. ತದನಂತರ ಸಂಘದ ಸದಸ್ಯರು ಸೇರಿ 'ಸುಗ್ರೀವ ಸಖ್ಯ', 'ವಾಲಿವಧೆ' ಎಂಬ ಕಥಾಭಾಗವನ್ನು ಒಳಗೊಂಡ ತಾಳಮದ್ದಳೆಯನ್ನು ನಡೆಸಿಕೊಟ್ಟರು. ಶ್ರೀ ಶಶಿಧರ್ ರಾವ್ ಚಿತ್ರಾಪುರ ಭಾಗವತರಾಗಿ ತಾಳಮದ್ದಳೆಯ ಕಥಾಮೃತಕ್ಕೆ ಶ್ರೀಕಾರವನ್ನು ಮಾಡಿದರು. ಈ ಕಥಾಭಾಗದಲ್ಲಿ ಪಾತ್ರಧಾರಿಗಳಾಗಿ ಶ್ರೀ ವಾಸುದೇವ ಶಾನುಭಾಗ್, ಶ್ರೀ ರಾಘವೇಂದ್ರ ರಾವ್, ಶ್ರೀ ಫಾಲಚಂದ್ರ ಶರ್ಮ, ಶ್ರೀಮತಿ ಉಮಾ ಶಾನುಭಾಗ್, ಶ್ರೀಮತಿ ಸುನಿತಾ ಶ್ರೀಕಾಂತ್, ಶ್ರೀಮತಿ ರಾಜೇಶ್ವರಿ ವಸಂತ್, ಕುಮಾರಿ ಸಂಜನಾ, ಕುಮಾರಿ ಶ್ರೇಯಾ ಇವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಘದ ಸದಸ್ಯರಿಗೆ ತಾಳಮದ್ದಳೆ ತರಬೇತಿಯನ್ನು ನೀಡಿದ ಶ್ರೀಯುತ ಹರಿಭಟ್ ಚಿತ್ರಾಪುರ ಇವರನ್ನು ಸನ್ಮಾನಿಸಲಾಯಿತು.

ಅನಂತರ 11–45ಕ್ಕೆ ಸರಿಯಾಗಿ ಸಭಾ ಕಾರ್ಯಕ್ರಮವನ್ನು ಆರಂಭಿಸಲಾಯಿತು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ್ ರಾವ್, ಅಧ್ಯಕ್ಷರಾದ ಶ್ರೀ ರಾಘವೇಂದ್ರ ರಾವ್, ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತ್ ರಾವ್ ಇನ್ನ, ನಮ್ಮ ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭಾಗ್ ಮತ್ತು ಶ್ರೀಮತಿ ಪರಿಮಳ ಪ್ರಶಾಂತ್, ಕಾರ್ಯದರ್ಶಿ ಶ್ರೀ ಫಾಲಚಂದ್ರ ಶರ್ಮ, ಕೋಶಾಧಿಕಾರಿ ಶ್ರೀ ರಾಧಾಕೃಷ್ಣ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಸುನಿತಾ ಶ್ರೀಕಾಂತ್, ಉಪಾಧ್ಯಕ್ಷೆ ಶ್ರೀಮತಿ ವೀಣಾ ಅರವಿಂದ, ಕಾರ್ಯದರ್ಶಿ ಶ್ರೀಮತಿ ಸಾವಿತ್ರಿ ಪುಷ್ಪರಾಜ್, ಯುವವೇದಿಕೆ ಉಪಾಧ್ಯಕ್ಷ ಶ್ರೀ ಅಶ್ವಿನ್ ಉಪಸ್ಥಿತರಿದ್ದರು. ಕಾರ್ಯಕ್ರಮವು ಕುಮಾರಿ ಸಂಜನಾಳ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಶ್ರೀಮತಿ ಸುನಿತಾ ಶ್ರೀಕಾಂತ್ ಇವರು ಎಲ್ಲರನ್ನೂ ಸ್ವಾಗತಿಸಿದರು. ಬಳಿಕ ಸಂಘದ ಹಿರಿಯ ಸದಸ್ಯರಾದ ಶ್ರೀಮತಿ ಯಶೋದ ಶಿವರಾವ್ ಹಾಗೂ ಶ್ರೀ ಬಾಲಕೃಷ್ಣ ಮತ್ತು ಲೀಲಾವತಿ ದಂಪತಿಗಳನ್ನು ಸಂಘದ ವತಿಯಿಂದ ಗೌರವಿಸಲಾಯಿತು.



ಶ್ರೀ ವಾಸುದೇವ ಶಾನುಭಾಗ್ ಇವರು ಆಟಿಯಲ್ಲಿ ಉಪಯೋಗಿಸುವ ಕೆಸುವಿನ ಎಲೆಯ ಮಹತ್ವ ಮತ್ತು ಅದರ ಔಷಧೀಯ ಗುಣಗಳ ಬಗ್ಗೆ ಮಾಹಿತಿ ನೀಡಿದರು. ಪಡುಬಿದ್ರೆ ಸಂಘದ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತ್ ರಾವ್ ಇನ್ನ ಇವರು ಆಟಿ ತಿಂಗಳ ಮಹತ್ವ ತಿಳಿಸಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದರು. ಕಾರ್ಯಕ್ರಮ ನಿರೂಪಕರಾದ ಶ್ರೀಮತಿ ಸುಧಾಮಣಿ ಫಾಲಚಂದ್ರ ಶರ್ಮಾ ಇವರು ನಮ್ಮ ತುಳು ಭಾಷೆಯಲ್ಲಿ ಕಾರ್ಯಕ್ರಮದ ನಿರೂಪಣೆ ಮಾಡಿದ್ದು ವಿಶೇಷವಾಗಿತ್ತು. ಈ ನಡುವೆ ಶ್ರೀಮತಿ ಪರಿಮಳ ಪ್ರಶಾಂತ್ ಅವರು ನೆರೆದ ಸಭಾ ಸದಸ್ಯರಿಗೆ ರಸಪ್ರಶ್ನೆಯನ್ನು ನಡೆಸಿ, ವಿಜೇತರಾದವರಿಗೆ ಸಸಿಗಳನ್ನು ಬಹುಮಾನ ರೂಪದಲ್ಲಿ ನೀಡಲು ವ್ಯವಸ್ಥೆ ಮಾಡಿದ್ದರು ಹಾಗೂ ಕೊನೆಗೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಅನಂತರ ನೆರೆದ ಬಂಧು–ಬಾಂಧವರಿಗೆ ಶ್ರೀ ಪ್ರವೀಣಕುಮಾರ್ ಮತ್ತು ಬಳಗದವರು ತಯಾರಿಸಿದ, ಆಟಿತಿಂಗಳ ಬಗೆಬಗೆಯ ಖಾದ್ಯಗಳನ್ನೊಳಗೊಂಡ ಭೋಜನವನ್ನು ಬಡಿಸಲಾಯಿತು.

ದಿನಾಂಕ 10–8–2025ರಂದು ಭಾನುವಾರ, ಶ್ರೀಯುತ ಭವಾನಿಶಂಕರ್ ರಾವ್ ಮಲ್ಲಮಾರು ಮತ್ತು ಮನೆಯವರ ಸಹಯೋಗದೊಂದಿಗೆ ನಮ್ಮ ಸಂಘದ ವತಿಯಿಂದ ಬೆಳಗ್ಗೆ ಗಂಟೆ 8–00ರಿಂದ, ರಾತ್ರಿ 8–00 ಗಂಟೆಯವರೆಗೆ ಭಜನಾ ಕಾರ್ಯಕ್ರಮವನ್ನು ನಡೆಸಲಾಯಿತು. ಸುಮಾರು 11 ತಂಡಗಳು ಇದರಲ್ಲಿ ಭಾಗವಹಿಸಿದ್ದವು.

## ಅಳಿದ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಶುಂಠಿಪಾಡಿ ಶ್ರೀ ಸಂತೋಷ್ ಕುಮಾರ್‌ರವರ ಧರ್ಮಪತ್ನಿ **ಶ್ರೀಮತಿ ಸುಚಿತ್ರಾ** (70) ತಾ. 12–8–2025ನೇ ಮಂಗಳವಾರ ನಿಧನರಾದರು. ಅವರು ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



**ಶಿರಿಯ ಶ್ರೀ ಜಯರಾಮ ಜೋಷಿ** (71) ತಾ. 6–8–2025ನೇ ಶನಿವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

●●●




**ನಂದಾವರ ಕೌಳಿಗೆ ಶ್ರೀ ಪ್ರಭಾಕರ್ ರಾವ್** (74) ತಾ. 10–08–2025ನೇ ರವಿವಾರ ಬೆಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಓರ್ವ ಪುತ್ರ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಮಂಗಳೂರು ಪಂಜಿಮೊಗರು ನಿವಾಸಿಯಾಗಿದ್ದ ದಿ। ಸುಬ್ಬರಾವ್ ಇವರ ಧರ್ಮಪತ್ನಿ **ಸುಶೀಲಾ ರಾವ್** (81) ಇವರು ದಿನಾಂಕ 07–08–2025ನೇ ಗುರುವಾರ ದೈವಾಧೀನರಾದರು. ಅವರು ಮೂವರು ಪುತ್ರರು ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ.

●●●



**ಏಳಿಂಜೆ ಯೋಗೇಶ್ ರಾವ್ (86)** ಬಾಲ್ಯದಲ್ಲಿಯೇ ನಾಯಕತ್ವದ ಗುಣವನ್ನು ಹೊಂದಿದ ಯೋಗೇಶ್ ರಾವ್ ಅವರು ಇನ್ನೊಬ್ಬರಿಗೆ ಆದರ್ಶಪ್ರಾಯರು. ಸರಕಾರಿ ಸೇವೆಯಲ್ಲಿ ಡೆಪ್ಯೂಟಿ ತಹಶೀಲ್ದಾರ್ ಆಗಿ ಮಾಡಿದ ಸೇವೆ ಅನನ್ಯ. ಏಳಿಂಜೆ ಲಕ್ಷ್ಮೀಜನಾರ್ದನ ಮಹಾಗಣಪತಿ ದೇವಸ್ಥಾನದ ಪ್ರಗತಿಯ ರೂವಾರಿಗಳೂ ಹೌದು. ಅಂತಾರಾಷ್ಟ್ರೀಯ ಲಯನ್ಸ್ ಕ್ಲಬ್‌ನ ಮಹೋನ್ನತ ಹುದ್ದೆಯನ್ನು ಅಲಂಕರಿಸಿ ಆದರ್ಶವನ್ನು ಮೆರೆದವರು. ಇವರು ಕೈಯಾಡಿಸದ ಕ್ಷೇತ್ರಗಳಿಲ್ಲ. ಆ ಕ್ಷೇತ್ರಗಳಿಗೆ ಹೊನ್ನ ಕಿರಣವನ್ನು ನೀಡಿದವರು. ಇವರಿಂದ ಅದೆಷ್ಟೋ ಜನರ ಬಾಳು ಬೆಳಕಾಗಿದೆ. ಇವರ ಅಗಲಿಕೆ ಸಮಾಜಕ್ಕೆ ಆಘಾತವೂ ನಷ್ಟವೂ ಹೌದು. ಇವರ ಆತ್ಮವು ಪರಮಾತ್ಮನಲ್ಲಿ ಲೀನವಾಗಲಿ. ಅವರ ಹೆಂಡತಿ, ಮಕ್ಕಳಿಗೆ, ಕುಟುಂಬಿಕರಿಗೆ, ಸಮಾಜದ ಬಂಧುಗಳಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು, ಶ್ರೀ ಲಕ್ಷ್ಮೀಜನಾರ್ದನ ಶ್ರೀ ಮಹಾಗಣಪತಿ ದೇವರು ನೀಡಲಿ ಎಂದು ಪ್ರಾರ್ಥಿಸಿ, ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ಅವರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.







ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

NAVADURGA FINANCIALS
Estd 1998
SCAN ME TO KNOW MORE!!!

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಅಷ್ಟಮಿ ಆಚರಣೆ'

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 17–08–2025ನೇ ರವಿವಾರ 'ಅಷ್ಟಮಿ ಆಚರಣೆ' ನಡೆಯಿತು. ಶಾಂಕರತತ್ವ ಅಭಿಯಾನದ ವತಿಯಿಂದ ವಿವಿಧ ಪಾರಾಯಣಗಳು ನಡೆಯಿತು. ಮುಂದೆ ಭಗವದ್ಗೀತೆ ಪಠಣ, ಮುದ್ದುಕೃಷ್ಣ, ಭಕ್ತಿಗೀತೆ, ಮಡಕೆ ಒಡೆಯುವ, ಚಕ್ಕುಲಿ ಸಂಖ್ಯೆ ಊಹನೆ, ಶಂಖ ಊದುವ ಸ್ಪರ್ಧೆ ವಿವಿಧ ವಿಭಾಗದಲ್ಲಿ ನಡೆಯಿತು. ತೀರ್ಪುಗಾರರಾಗಿ ಶ್ರೀ ಸಂಜಯ್ ಕುಮಾರ್ ಪಿ., ಶ್ರೀಮತಿ ಶ್ರೀಲತಾ ಜಯಪ್ರಕಾಶ್, ಶ್ರೀಮತಿ ನಿವೇದಿತಾ ರಾವ್, ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ರಮ್ಯಾ ಅರುಣ್, ಶ್ರೀಮತಿ ವೀಣಾ ರಾಮಮೋಹನ್ ಬೆಳ್ಳೆ, ಶ್ರೀ ಸುರೇಶ ಕಡಬ ಸಹಕರಿಸಿದರು. ಭೋಜನದ ಬಳಿಕ ಪ್ರಾರ್ಥನೆಯನ್ನು ಕುಮಾರಿ ನಿಹಾರಿಕಾ ಹಾಡಿದರೆ, ಶ್ರೀಕೃಷ್ಣಾವತಾರದ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸಂಜಯ್ ಕುಮಾರ್ ಪಿ. ನಡೆಸಿಕೊಟ್ಟರು. ಶ್ರೀ ಮುರಳೀಧರ್ ರಾವ್ ಮತ್ತು ಮಂಜುಳಾ ರಾವ್ ದಂಪತಿಗಳನ್ನು ಶ್ರೀ ಸಭಾದ ಅಧ್ಯಕ್ಷ ಡಾ. ಎ. ಪಿ. ಕೃಷ್ಣ ಮತ್ತು ಸಭಾದ ಎಲ್ಲಾ ಪದಾಧಿಕಾರಿಗಳು ಒಟ್ಟಾಗಿ ಸನ್ಮಾನಿಸಿದರು. ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲ ಪ್ರಭಾಕರ್ ಸನ್ಮಾನಿತರನ್ನು ಪರಿಚಯಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕುಮಾರಿ ಸುಮೇಧಾ, ಸಮೃದ್ಧಿ, ಆಕಾಂಕ್ಷ ರಾವ್ ಪಿ., ಶರಣ್ಯ, ಮಾ| ಅಶ್ವಿನ್, ಶ್ರೀಮತಿ ವೀಣಾ ರಾಮಮೋಹನ್ ಬೆಳ್ಳೆ ನೃತ್ಯ ಪ್ರದರ್ಶನ, ಮಾ| ಅಭಿನವ ಉಪಾಧ್ಯಾಯನ ವಯೋಲಿನ್ ವಾದನ ಮತ್ತು ಹಲವು ಸಮೂಹ ನೃತ್ಯಗಳು ನಡೆದವು. ಶ್ರೀ ಸೋಮಶೇಖರ್ ಭಟ್ ಇವರು ವೇದಿಕೆಯನ್ನು ಆಕರ್ಷಕವಾಗಿ ಶೃಂಗರಿಸಿ ಸಹಕರಿಸಿದರು. ಕುಮಾರಿ ಆಕಾಂಕ್ಷ ರಾವ್ ಪಿ. ತರಬೇತು ಗೊಳಿಸಿದ ಮಕ್ಕಳ ಸಮೂಹ ನೃತ್ಯ ಮತ್ತು ಶ್ರೀಮತಿ ಅನುರಾಧ ಕಿಶೋರ್ ನಿರ್ದೇಶನದ ನಾಲ್ಕು ತಂಡದ 28 ಕಲಾವಿದರ ನೃತ್ಯ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ ರಘುವೀರ್ ಪೆರ್ಡೂರ್ ಉತ್ತಮ ಛಾಯಾಚಿತ್ರಗಳನ್ನು ಮತ್ತು ವೀಡಿಯೋಗಳನ್ನು ಒದಗಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಜಯಂತಿ ವಿನೋದ್ ರಾವ್, ಜೊತೆ ಕಾರ್ಯದರ್ಶಿಗಳಾದ ಶ್ರೀಮತಿ ಶುಭ ರವಿಕಿರಣ್, ಶ್ರೀಮತಿ ಅಕ್ಷತಾ ಮನೀಶ್, ಯುವವೇದಿಕೆಯ ಶ್ರೀ ಪ್ರಶಾಂತ್ ರಾವ್ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಶ್ರೀನಿವಾಸ್ ರಾವ್ ಮತ್ತು ಮಹಿಳಾ ವೇದಿಕೆ ಉಪಾಧ್ಯಕ್ಷೆ ಶ್ರೀಮತಿ ಪುಷ್ಪಾವತಿ ದಂಪತಿಗಳು ಎಲ್ಲಾ ಬಹುಮಾನಗಳನ್ನು ಪ್ರಾಯೋಜಿಸಿದರು. ಮುದ್ದುಕೃಷ್ಣ ವೇಷ ಧರಿಸಿದ ಎಲ್ಲಾ ಪುಟಾಣಿಗಳಿಗೆ ಶ್ರೀ ಸದಾಶಿವ ಶಾಸ್ತ್ರಿ, ಶ್ರೀಮತಿ ಸೌಭದ್ರಾ ಶಾಸ್ತ್ರಿ ಮತ್ತು ಯುವವೇದಿಕೆ ಅಧ್ಯಕ್ಷ ಶ್ರೀ ಜನಕರಾಜ್ ದಂಪತಿಗಳು ವಿಶೇಷ ಬಹುಮಾನ ನೀಡಿದರು. ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಶಕುಂತಲಾ ರಾವ್ ಇವರು ಧನ್ಯವಾದ ನೀಡಿದರು. ಬಹುಮಾನ ವಿತರಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ***ವರದಿ : ಶ್ರೀಮತಿ ಶುಭ ರವಿಕಿರಣ್***

---

### ಶ್ರೀ ಸುಬ್ರಹ್ಮಣ್ಯ ಸಭಾ ಅಷ್ಟಮಿ ಆಚರಣೆ ಸ್ಪರ್ಧಾ ವಿಜೇತರು

**ಭಗವದ್ಗೀತೆ ಪಠಣ ಸ್ಪರ್ಧೆ** : 10 ವರ್ಷದ ಒಳಗಿನ ವಿಭಾಗ : I - ವರೇಣ್ಯ, II - ಸಮೃದ್ಧಿ ಶಾನುಭಾಗ್, III - ಧನ್ವಿತ ಶಾನುಭಾಗ್. 10ರಿಂದ 18 ವರ್ಷದೊಳಗಿನ ವಿಭಾಗ : I - ಗೌರೀಶ್ ರಾವ್, II - ವೈಷ್ಣವಿ ರಾವ್. 18 ವರ್ಷ ಮೇಲ್ಪಟ್ಟ ವಿಭಾಗ I - ವಸುಂಧರಾ ಶಾನುಭಾಗ್ ಮತ್ತು ಸೌಂದರ್ಯಲಕ್ಷ್ಮಿ, II - ಸ್ವಾತಿ ಎಂ., III - ವೀಣಾ ಬೆಳ್ಳೆ, **ಮುದ್ದು ಕೃಷ್ಣ ವೇಷ ಸ್ಪರ್ಧೆ** : 3 ವರ್ಷದೊಳಗಿನ ವಿಭಾಗ I - ಮಾಯಾ ರಾವ್ ಮತ್ತು ಅಚಿಂತ್ಯ ರಾವ್ ಪಿ. II - ಶ್ರೀನಿಕ ಜಿ. ರಾವ್ III - ಸೋಮಸ್ಕಂದ. 4ರಿಂದ 8 ವರ್ಷದೊಳಗಿನ ವಿಭಾಗ : I - ಗನಿಷ್ಕ ಮತ್ತು ಅನ್ನಪೂರ್ಣ, II - ವರೇಣ್ಯ ಮತ್ತು ಸಮೃದ್ಧಿ, II - ಆರಾಹಿ ನಿಡ್ಯಾಳ ಮತ್ತು ಆದ್ಯಂತ. **ಭಕ್ತಿಗೀತೆ ಸ್ಪರ್ಧೆ** : 10ರಿಂದ 18 ವರ್ಷದೊಳಗಿನ ವಿಭಾಗ : I - ದೇವಾಂಶ ರಾವ್, II - ವೈಷ್ಣವಿ ರಾವ್, ಮನಸ್ವಿನಿ ರಾವ್. 19ರಿಂದ 40 ವರ್ಷದೊಳಗಿನ ವಿಭಾಗ : I - ರೋಹಿಣಿ ವಿಕ್ರಮ್, II - ಸಾತ್ವಿಕ್, III - ಸೌಂದರ್ಯಲಕ್ಷ್ಮಿ, 40 ವರುಷ ಮೇಲ್ಪಟ್ಟ ವಿಭಾಗ : I - ಶಕುಂತಲಾ ರಾವ್, II - ಸತ್ಯಶಂಕರ ರಾವ್, III - ನಿವೇದಿತಾ ರಾವ್. **ಮಡಿಕೆ ಒಡೆಯುವ ಸ್ಪರ್ಧೆ** : ಮಕ್ಕಳ ವಿಭಾಗ I - ಆಕಾಂಕ್ಷ ರಾವ್ ಪಿ., ಮಹಿಳಾ ವಿಭಾಗ I - ಸೌಜನ್ಯ ರಾವ್, ಪುರುಷರ ವಿಭಾಗ I - ಗೌರೀಶ್ ಜಿ. ರಾವ್. **ಶಂಖ ಊದುವ ಸ್ಪರ್ಧೆ** : 16 ವರ್ಷದೊಳಗಿನ ವಿಭಾಗ I - ಪ್ರಣತಿ ಬಿ. ರಾವ್ II - ಗೌರೀಶ್ ಜಿ. ರಾವ್. 16 ವರ್ಷ ಮೇಲ್ಪಟ್ಟ ವಿಭಾಗ : I - ಸಂದೀಪ್ ಬಿ. ರಾವ್, II - ಸದಾಶಿವ ಶಾಸ್ತ್ರಿ ಕೆ. **ಚಕ್ಕುಲಿ ಊಹನೆ ಸ್ಪರ್ಧೆ** I - ಶ್ರೀನಿವಾಸ್ ರಾವ್ ಮತ್ತು ಗಣೇಶ ಎಸ್.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಆಟಿತೊ ಆಟ-ಕೂಟ'

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಯುವವೇದಿಕೆ ಮತ್ತು ಮಹಿಳಾವೇದಿಕೆ ವತಿಯಿಂದ ತಾ. 20–7–2025ನೇ ರವಿವಾರದಂದು 'ಆಟಿತೊ ಆಟ–ಕೂಟ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಡಾ| ಎ. ಪಿ. ಕೃಷ್ಣ, ಇತರ ಪದಾಧಿಕಾರಿಗಳು, ಗಣ್ಯರ ಉಪಸ್ಥಿತಿಯಲ್ಲಿ ಚೆನ್ನೆಮಣೆ, ಕಲ್ಲಾಟ, ಕೇರಂ, ಚೆಸ್, ಹಗ್ಗಜಿಗಿತ ಪಂದ್ಯಾಟವನ್ನು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ರಾವ್ ಚೆಸ್ ಅಕಾಡೆಮಿ ಶ್ರೀ ರಾಹುಲ್ ಚೆಸ್ ಪಂದ್ಯಾಟ, ಶ್ರೀ ಜಯಚಂದ್ರ ಬಿ., ಶ್ರೀ ಅನಿಲ್ ಎನ್. ಕೇರಂ ಪಂದ್ಯಾಟ, ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲ ಪ್ರಭಾಕರ್ ಕಲ್ಲಾಟ, ಮಹಿಳಾ ವೇದಿಕೆ ಉಪಾಧ್ಯಕ್ಷೆ ಶ್ರೀಮತಿ ಪುಷ್ಪಾ ಶ್ರೀನಿವಾಸ್, ಕಾರ್ಯದರ್ಶಿ ಶ್ರೀಮತಿ ಶಕುಂತಲಾ ವಿಜಯ ಕುಮಾರ್ ಚೆನ್ನೆಮಣೆ, ಮಹಿಳಾ ವೇದಿಕೆ ಜೊತೆ ಕಾರ್ಯದರ್ಶಿ ಶ್ರೀಮತಿ ಅಕ್ಷತಾ ಎಂ. ರಾವ್ ಹಗ್ಗಜಿಗಿತ ಸ್ಪರ್ಧೆಗಳನ್ನು ನಡೆಸಿಕೊಟ್ಟರು. ಆಟಿಯ ವಿಶೇಷ ಖಾದ್ಯಗಳನ್ನು ಒಳಗೊಂಡ ಭೋಜನದ ಬಳಿಕ ಮಹಿಳಾ ವೇದಿಕೆಯ ಉಪಾಧ್ಯಕ್ಷೆ ಶ್ರೀಮತಿ ವೀಣಾಬೆಳ್ಳೆ ಅವರ ಪ್ರಾರ್ಥನೆಯೊಂದಿಗೆ ಮಧ್ಯಾಹ್ನದ ಕಾರ್ಯಕ್ರಮಗಳು ಆರಂಭವಾಯಿತು. 'ಹಳ್ಳಿಉಡುಗೆ' ಸ್ಪರ್ಧೆಯ ತೀರ್ಪುಗಾರರಾಗಿ ಶ್ರೀಮತಿ ಭಾರತಿ ಸಂಜಯ ಕುಮಾರ್ ಮತ್ತು ಶ್ರೀಮತಿ ಕವಿತಾ ಪ್ರದೀಪ್ ಕುಮಾರ್ ಸಹಕರಿಸಿದರು.

'ಕೃಷಿ ಪಂಡಿತ' ಪ್ರಶಸ್ತಿ ಗಳಿಸಿದ ಶ್ರೀ ಸಭಾದ ಉಪಾಧ್ಯಕ್ಷರಾದ ಶ್ರೀ ಇನ್ನಾ ಚಂದ್ರಕಾಂತರಾಯರನ್ನು ಗೌರವಿಸಲಾಯಿತು. ಬಳಿಕ ಸಮಾಜದ ಸುಮಾರು 30 ಪ್ರತಿಭೆಗಳಿಂದ 'ಕರೋಕೆ ರಸಮಂಜರಿ' ಕಾರ್ಯಕ್ರಮವು ಅದ್ಭುತವಾಗಿ ಜರುಗಿತು. ಬಹುಮಾನಗಳನ್ನು ಶ್ರೀ ರಾಮಮೋಹನ್ ಬೆಳ್ಳೆ ಮತ್ತು ಪ್ರಾಯೋಜಕರು ವಿತರಿಸಿದರು. ಶ್ರೀಸಭಾ ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಕಾರ್ಯಕ್ರಮದ ವೀಡಿಯೋ ಮತ್ತು ಚಿತ್ರಗಳನ್ನು ಒದಗಿಸಿದರು. ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಜಯಂತಿ ವಿನೋದ್ ರಾವ್, ಯುವವೇದಿಕೆಯ ಅಧ್ಯಕ್ಷ ಶ್ರೀ ಜನಕರಾಜ್, ಪದಾಧಿಕಾರಿಗಳಾದ ಶ್ರೀ ರಾಕೇಶ್ ಕುಡುಪು, ಶ್ರೀ ಪ್ರಶಾಂತ ರಾವ್, ಶ್ರೀ ಸಾಯಿಪ್ರಕಾಶ್ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಜೊತೆ ಕಾರ್ಯದರ್ಶಿ ಶ್ರೀಮತಿ ಶುಭ ರವಿಕಿರಣ್ ಧನ್ಯವಾದ ನೀಡಿದರೆ, ಶ್ರೀ ಸಭಾದ ಕೋಶಾಧಿಕಾರಿ ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.

***ವರದಿ : ಶ್ರೀಮತಿ ಶುಭ ರವಿಕಿರಣ್***

---

### ಶ್ರೀ ಸಭಾ 'ಆಟಿತೊ ಆಟ ಕೂಟ' ಸ್ಪರ್ಧಾ ವಿಜೇತರು :

**ಕಲ್ಲಾಟ** : I : ವೀಣಾ ಶಂಕರ್, II : ರಮ್ಯಾ ರಾಜ್; **ಚೆನ್ನೆಮಣೆ** : I : ವೀಣಾ ಜಗದೀಶ್; II : ರತ್ನ ರಾಜೇಂದ್ರ; **ಹಗ್ಗಜಿಗಿತ** : 6ರಿಂದ 10 ವರುಷ : ಹುಡುಗರ ವಿಭಾಗ : I : ದೇವಾಂಶ, II : ಪ್ರತೀಕ; ಹುಡುಗಿಯರ ವಿಭಾಗ I : ಮನಸ್ವಿನಿ ರಾವ್, ದ್ವಿತೀಯ : ಅಂಕಿತಶ್ರೀ; **ಕೇರಂ** ಜೂನಿಯರ್ : I : ಗೌರೀಶ ರಾವ್ ಮತ್ತು ಪ್ರತೀಕ, II : ಆರ್ಯನ್ ಪಿ. ರಾವ್ ಮತ್ತು ಅಭಿನವ ಉಪಾಧ್ಯಾಯ; ಸೀನಿಯರ್ : I : ಸತ್ಯಮೂರ್ತಿ ರಾವ್ ಮತ್ತು ಅಭಿಜ್ಞಾ II : ಸಿ. ಬಿ. ರಾವ್ ಮತ್ತು ಗಣೇಶ್; **ಚೆಸ್** : I : ದೇವಾಂಶ ರಾವ್, II : ಅಲೋಕ್ ರಾವ್; **ಹಳ್ಳಿ ಉಡುಗೆ** : ಮಕ್ಕಳ ವಿಭಾಗ : I : ವರೇಣ್ಯ ವಿ. ರಾವ್, ಮಹಿಳಾ ವಿಭಾಗ : I : ರೋಹಿಣಿ ವಿಕ್ರಮ್ II : ಕನಕವಲ್ಲಿ ಹರ್ಷಕುಮಾರ್; ಪುರುಷರ ವಿಭಾಗ : I : ಶ್ರೀಧರ್ ರಾವ್, II : ಶ್ರೀನಿವಾಸ್ ರಾವ್

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013



# ಪೊಳಲಿ ಶ್ರೀ ಸುಬ್ರಹ್ಮಣ್ಯ ಸಭಾದ ನಿವೇಶನದ ನಾಗಬನದಲ್ಲಿ ಪಂಚಮಿ ಪೂಜೆ



ಪೊಳಲಿ ಶ್ರೀ ಸುಬ್ರಹ್ಮಣ್ಯ ಸಭಾದ ನಿವೇಶನದ ನಾಗಬನದಲ್ಲಿ ವೇದಮೂರ್ತಿ ಪಾವಂಜೆ ರವಿ ಉಪಾಧ್ಯಾಯ ಪಂಚಮಿ ಪೂಜೆ ನೆರವೇರಿಸಿದರು. ಶ್ರೀ ಸಭಾ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕ ಶ್ರೀ ಸುರೇಶ್ ಕಡಬ ಸೇರಿದಂತೆ ಹಲವಾರು ಭಕ್ತರು ಪಾಲ್ಗೊಂಡಿದ್ದರು.






Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur    *Printed at :* Rajesh Power Press, Darbe - 574 202, Puttur, D. K.